ಸೃಜನಿ

I S S N: 2583-3510

SIRDF JOURNALS

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 142-149
Bi-Monthly, Peer-Reviewed, Open Access, Indexed Journal

editor@srujani.in
www.srujani.in

# ಅಜ್ಜಂಪುರ ಜಿ ಸೂರಿಯವರ ತೋಟದ ಮನೆ ಮತ್ತು ಶಾಪ ಕಾದಂಬರಿಗಳಲ್ಲಿ ದಲಿತರ ಬದುಕಿನ ಚಿತ್ರಣ ಮತ್ತು ದಲಿತಪರ ಚಿಂತನೆ

**ಕರಿಬಸವನಗೌಡ.ಜಿ[1] ಮತ್ತು ಡಾ. ಬಿ.ಎಸ್.ಸುದೀಪ್[2]**

[1]ಸಂಶೋಧನಾ ವಿದ್ಯಾರ್ಥಿ, [2]ಸಹಾಯಕ ಪ್ರಾಧ್ಯಾಪಕರು

ಕನ್ನಡ ವಿಭಾಗ, ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು.

**Abstract:**

*ಅಜ್ಜಂಪುರ ಜಿ. ಸೂರಿಯವರು ಪ್ರಗತಿಶೀಲ ಕಾಲಘಟ್ಟದ ಪ್ರಮುಖ ಲೇಖಕರಲ್ಲಿ ಒಬ್ಬರು. ಇವರು ಸೃಜನಶೀಲ ಲೇಖಕರು ಹಾಗೂ ಅನುವಾದಕರು ಆಗಿದ್ದಾರೆ. ಸೂರಿಯವರು ಸೃಜನಶೀಲ ಕೃತಿಗಳೊಂದಿಗೆ ಅನುವಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳಲ್ಲಿ ದಲಿತ ಮತ್ತು ಶೋಷಿತ ವರ್ಗದ ಬಗೆಗೆ ಕಳಕಳಿ ಮತ್ತು ಚಿಂತನೆಗಳನ್ನು ಕಾಣಬಹುದು. ಈ ಎರಡು ವಸ್ತುಗಳನ್ನು ಪ್ರಮುಖವಾಗಿ ಆದರಿಸಿದ ಕೃತಿಗಳೆಂದರೆ 'ತೋಟದ ಮನೆ' ಮತ್ತು 'ಶಾಪ'. ಇವು ಸ್ವರಚಿತ ಕಾದಂಬರಿಗಳಾಗಿವೆ. ಈ ಕಾದಂಬರಿಗಳಲ್ಲಿ ಎರಡು ತಲೆಮಾರುಗಳನ್ನು ಗುರುತಿಸಬಹುದು. ಒಂದನೆಯದು ಯಜಮಾನಶಾಹಿ ಮತ್ತು ಉಳಿಗಮಾನ್ಯ ವ್ಯವಸ್ಥೆಗೆ ಬದ್ದರಾಗಿ ನಡೆಯುವುದು. ಎರಡನೆಯದು ಯಜಮಾನಶಾಹಿ ಮತ್ತು ಊಳಿಗಮಾನ್ಯ ವ್ಯವಸ್ಥೆಯನ್ನು ವಿರೋಧಿಸಿ ಸ್ವತಂತ್ರವಾದ ಬದುಕನ್ನು ಕಟ್ಟಿಕೊಳ್ಳುವ ಯುವಜನಾಂಗ. ಅಲ್ಲದೆ ಶೋಷಣೆ ಮಾಡುವವರು ಯಾವಾಗಲೂ ಪ್ರಗತಿಪರ ಚಿಂತನೆಗಳನ್ನು ವಿರೋಧಿಸಿ ತಾವು ಆಳುವ ಗ್ರಾಮವನ್ನು ಯಥಾಸ್ಥಿತಿಯಲ್ಲಿಡುವ ಪ್ರಯತ್ನವನ್ನು ಮಾಡುವ ಮನಸ್ಥಿತಿಯುಳ್ಳ ಮೇಲ್ವರ್ಗದ ಸ್ವರೂಪವನ್ನು ಸೂರಿಯವರು ಈ ಕಾದಂಬರಿಗಳಲ್ಲಿ ನಿರೂಪಿಸಿದ್ದಾರೆ.*

**Keywords:** *ತೋಟದಮನೆ, ಶಾಪ, ಯಜಮಾನ ಶಾಹಿ, ಊಳಿಗಮಾನ್ಯ ವ್ಯವಸ್ಥೆ, ಶೋಷಣೆ ಮತ್ತು ದೌರ್ಜನ್ಯ, ಶಿಕ್ಷಣ ಮತ್ತು ಪ್ರಗತಿಪರ ಚಿಂತನೆ.*

## ಪೀಠಿಕೆ

ಅಜ್ಜಂಪುರ ಜಿ. ಸೂರಿಯವರು ಕನ್ನಡದ ಪ್ರಸಿದ್ಧ ಲೇಖಕರಲ್ಲೊಬ್ಬರು. ಇವರ ಕಾದಂಬರಿಗಳಲ್ಲಿ ಉತ್ಕಟತೆ ಮತ್ತು ಭಾವತೀವ್ರತೆ ಮುಖ್ಯವಾಗಿ ಗೋಚರಿಸುತ್ತದೆ. ಇವರ ಸಾಹಿತ್ಯದ ವಸ್ತು ವಿಷಯಗಳು ಜನಸಾಮಾನ್ಯರ ಬದುಕಿನ ಅಂತರಂಗದ ತುಡಿತಗಳನ್ನು ಒಳಗೊಂಡಿರುವಂತವು. ಆದರೆ ಕೆಲವೊಮ್ಮೆ ಸಿನಿಮೀಯ ಭಾಷೆ ಹಾಗೂ ರಂಜನೀಯ ಭಾಷೆ ಅಲ್ಲಲ್ಲಿ ಬಳಕೆಯಾಗುವುದರಿಂದ ಕೃತಿಯ ವಸ್ತುವಿಗೂ ವಾಸ್ತವ ಬದುಕಿಗೂ ಅಂತರವಿರುವಂತೆ ಭಾಸವಾಗುತ್ತದೆ. ಅಲ್ಲದೆ ಇದು ಓದುಗ ವರ್ಗವನ್ನು ಹೆಚ್ಚಿಸುವ ಮನೋಇಚ್ಛೆಯೂ ಆಗಿರುತ್ತದೆ.

ಅಜ್ಜಂಪುರ ಜಿ. ಸೂರಿಯವರ ತೋಟದಮನೆ ಮತ್ತು ಶಾಪ ಈ ಎರಡು ಕಾದಂಬರಿಗಳು

**Please cite this article as:** ಕರಿಬಸವನಗೌಡ. ಜಿ ಮತ್ತು ಬಿ.ಎಸ್.ಸುದೀಪ್. (2024). ಅಜ್ಜಂಪುರ ಜಿ ಸೂರಿಯವರ ತೋಟದ ಮನೆ ಮತ್ತು ಶಾಪ ಕಾದಂಬರಿಗಳಲ್ಲಿ ದಲಿತರ ಬದುಕಿನ ಚಿತ್ರಣ ಮತ್ತು ದಲಿತಪರ ಚಿಂತನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(3), 142–149

ಯಜಮಾನಿಕೆ ಮತ್ತು ಶೋಷಣೆಯ ವಸ್ತುವನ್ನೊಳಗೊಂಡಿವೆ. ಜಮೀನ್ದಾರಿಕೆಯನ್ನು ವಿರೋಧಿಸಿ ಶಿಕ್ಷಣ ಪಡೆಯುವ ಮೂಲಕ ಗ್ರಾಮದ ಅಭಿವೃದ್ಧಿಗೆ ಕಾರಣವಾಗುವ ಅಂಶಗಳನ್ನು ಸೂರಿಯವರು ಸೃಷ್ಟಿಸುವ ಪಾತ್ರಗಳಲ್ಲಿ ಕಂಡು ಬರುತ್ತದೆ.

ತೋಟದಮನೆ ಕಾದಂಬರಿಯು 1994ರಲ್ಲಿ ಗಜಾನನ ಪ್ರಕಾಶನದಿಂದ ಪ್ರಕಟಗೊಂಡಿದೆ. ಇದು ಒಟ್ಟು 114 ಪುಟಗಳನ್ನು ಒಳಗೊಂಡಿದೆ. ಈ ಕಾದಂಬರಿಯಲ್ಲಿ ಕಂಡುಬರುವ ಪ್ರಮುಖ ಪಾತ್ರಗಳೆಂದರೆ ಚಿಕ್ಕೀರಯ್ಯ-ಹನುಮಕ್ಕ–ತಿಮ್ಮವ್ವ ಕರಿಯ–ರಾಮು–ಜ್ಯೂಲಿ/ರಂಗೇಗೌಡ–ಗಯ್ಯಾಳಿ ಲಕ್ಕವ್ವ, ತಿಮ್ಮೇಗೌಡ–ಗೋವಿಂದ, ರುದ್ರಯ್ಯ, ರಂಗ/ಕಡಾಣಿಕಲ್ಲಕ್ಕ, ಮಲ್ಲಣ್ಣ ಮುಂತಾದವು. ಈ ಕಾದಂಬರಿಯಲ್ಲಿ ದಲಿತ ರೈತನ ಅಸಹಾಯಕತೆಯನ್ನು ತನ್ನ ದುರಪಯೋಗಪಡಿಸಿಕೊಳ್ಳುವ ಜಮೀನ್ದಾರ ಹಾಗೂ ಆತನ ದರ್ಪ ಮತ್ತು ದೌರ್ಜನ್ಯದಿಂದ ಕೆಳವರ್ಗದ ಸ್ತ್ರೀಯರನ್ನು ದುರ್ಬಳಕೆ ಮಾಡಿಕೊಳ್ಳುವ ಪ್ರಸಂಗಗಳನ್ನು ಚಿತ್ರಿಸಿದ್ದಾರೆ. ಈ ಕಾದಂಬರಿ ಗ್ರಾಮೀಣ ಬದುಕಿನ ಹಿನ್ನೆಲೆಯನ್ನು ಒಳಗೊಂಡಿದೆ.

ಈ ಕಾದಂಬರಿಯಲ್ಲಿ ಬರುವ ಚಿಕ್ಕೀರಯ್ಯ ತನಗಿದ್ದ ಒಂದುವರೆ ಎಕರೆ ಪಿತ್ರಾರ್ಜಿತ ಆಸ್ತಿಯಲ್ಲಿ ವ್ಯವಸಾಯ ಮಾಡುವ ಉದ್ದೇಶದಿಂದ ಬಾವಿಯನ್ನು ತೋಡಿಸುವ ಪ್ರಯತ್ನ ಮಾಡುತ್ತಾನೆ. ಆದರೆ ನೀರು ಬಾರದಿದ್ದಾಗ ನಿರಾಸೆಯಾಗುತ್ತಾನೆ. ನೀರೊಂದಿದ್ದರೆ ನಾನು ಕೂಡಾ ಆರ್ಥಿಕವಾಗಿ ಬದಲಾಗಬಹುದು ಎಂದುಕೊಳ್ಳುತ್ತಾನೆ. ಹೇಗಾದರೂ ಮಾಡಿ ತಾನೂ ಸ್ಥಿತಿವಂತನಾಗಬೇಕೆಂಬ ಹಂಬಲದಿಂದ ಬೋಳು ತಲೆಯಂತಾಗಿದ್ದ ಕಾದ ನೆಲದಲ್ಲಿ ಹೊನ್ನು ಬೆಳೆದು ಧಾನ್ಯಲಕ್ಷ್ಮಿಯ ಕೃಪೆಗೆ ಪಾತ್ರನಾಗಬೇಕೆಂದುಕೊಂಡು ಕುಂತಲ್ಲಿ ನಿಂತಲ್ಲಿ, ನೀರಿನ ಸೆಲೆ ಉಕ್ಕಿ ಹರಿಯುತ್ತಿರುವಂತೆ, ಭೂಮಿತಾಯಿ ಹಚ್ಚ ಹಸಿರು ಸೀರೆಯುಟ್ಟು ಕೃತಾರ್ಥಳಾದಂತೆ ಕನಸು ಕಾಣುತ್ತಾನೆ.

ಉತ್ಸಾಹಿ ಚಿಕ್ಕೀರಯ್ಯ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲಸಿಗುತ್ತದೆ ಎಂದು ತಿಳಿದು ಸಾಲ ಮಾಡಿ ತನ್ನ ಜಮೀನಿನಲ್ಲಿ ಬಾವಿ ತೋಡಿಸಿ ಆಯಿಲ್‌ಎಂಜಿನ್ ತಂದು ಹೊಲದಲ್ಲಿ ಜೋಡಿಸುತ್ತಾನೆ. ಮೊದಲಿಗೆ ಕೆಲಸ ಮಾಡಿದ ಎಂಜಿನ್ ಕಾಲಾನಂತರ ಸ್ಥಗಿತವಾಗುತ್ತದೆ. ಅದನ್ನು ರಿಪೇರಿ ಮಾಡಿಸುವ ಉದ್ದೇಶದಿಂದ ರಂಗೇಗೌಡನ ಬಳಿ ಸಾಲ ಮಾಡುತ್ತಾನೆ. “ಮಳೆಯು ರೈತನೊಂದಿಗೆ ಜೂಜಾಟವಾಡುತ್ತದೆ” ಎಂಬ ಮಾತಿನಂತೆ ಕಾಲಕ್ಕೆ ಸರಿಯಾಗಿ ಮಳೆ ಬಾರದೆ ಬೆಳೆಯೆಲ್ಲಾ ನಾಶವಾಗುತ್ತದೆ. ಚಿಕ್ಕೀರಯ್ಯ ಬೆಳೆದ ಬೆಳೆಯೆಲ್ಲಾ ರಂಗೇಗೌಡರ ಸಾಲಕ್ಕೆ ಸರಿಯಾಗುತ್ತದೆ. ಅದೇ ವೇಳೆಗೆ ಬ್ಯಾಂಕಿನವರು ಸಾಲ ವಸೂಲಿ ಮಾಡಲು ಬರುತ್ತಾರೆ. ಒಂದು ವೇಳೆ ಸಾಲವನ್ನು ತೀರಿಸದಿದ್ದರೆ ಡೀಸೆಲ್ ಎಂಜಿನ್‌ನ್ನು ಜಪ್ತಿ ಮಾಡುವುದಾಗಿ ಹೇಳಿದಾಗ ತಿಮ್ಮವ್ವ ತನ್ನಲ್ಲಿದ್ದ ಬಂಗಾರದ ಒಡವೆಗಳನ್ನೆಲ್ಲಾ ಬಿಚ್ಚಿ ಬ್ಯಾಂಕಿನವರಿಗೆ ಕೊಟ್ಟು ಸಾಲವನ್ನು ತೀರಿಸುತ್ತಾಳೆ. ಇದನ್ನು ಕಂಡ ತಿಮ್ಮವ್ವನ ಗಂಡ ಕೋಪಗೊಂಡು ಬ್ಯಾಂಕಿನವರಿಗೆ ಕೊಟ್ಟ ಒಡವೆಗಳನ್ನು ತೆಗೆದುಕೊಂಡು ಬರುವಂತೆ ತಿಳಿಸಿ ತವರಿನಲ್ಲೆ ತಿಮ್ಮವ್ವನನ್ನು ಬಿಟ್ಟು ಹೋಗುತ್ತಾನೆ. ಇಲ್ಲಿ ಒಂದೆಡೆ ಅಳಿಯ ಒಡವೆಗಳಿಗೋಸ್ಕರ ತಿಮ್ಮವ್ವ ಮತ್ತು ಚಿಕ್ಕೀರಯ್ಯನನ್ನು ಶೋಷಣೆಗೆ ಒಳಪಡಿಸಿದರೆ ಮತ್ತೊಂದೆಡೆ ಬಂಡವಾಳಶಾಹಿ ವ್ಯವಸ್ಥೆಯ ಭಾಗವಾದ ಬ್ಯಾಂಕಿನವರಿಂದ ಶೋಷಣೆಗೆ ಒಳಗಾಗುತ್ತಾನೆ. ಹೀಗೆ ಚಿಕ್ಕೀರಯ್ಯನ ಮನೆಯ ಪರಿಸ್ಥಿತಿ ಹೀನಾಯ ಸ್ಥಿತಿಯನ್ನು ತಲುಪುತ್ತದೆ.

ತಿಮ್ಮವ್ವ ಅನಿವಾರ್ಯವಾಗಿ ಗೌಡರ ಗೋದಾಮಿನಲ್ಲಿ ಅಡಿಕೆ ಸುಲಿಯುವ ಕೆಲಸಕ್ಕೆ ಹೋಗುತ್ತಾಳೆ. ರಂಗೇಗೌಡನ ಕಾಮದಕಣ್ಣು ತಿಮ್ಮವ್ವನ ಮೇಲೆ ಬಿದ್ದು ಅವಳನ್ನು ಕಲ್ಲವ್ವನ ಮೂಲಕ ಕರೆಸಿಕೊಂಡು ಅತ್ಯಾಚಾರವೆಸಗುತ್ತಾನೆ. ಇದನ್ನು

ಪ್ರತಿಭಟಿಸಿದ ತಿಮ್ಮವ್ವ "ಪಾಪಿ ಮುಂಡೇ ಮಗ್ನೆ ನನ್ ಮಾನ ಕಳ್ದಲ್ಲೋ! ಯಾವ್ ಮಕ ಇಟ್ಕೊಂಡು ಇದನ್ನ ನನ್ನ ಗಂಡನಿಗೆ ಹೇಳಿ? ನಿನ್ ಸುಮ್ನೆ ಬಿಡಾಕಿಲ್ಲ, ಊರಿಗೆಲ್ಲಾ ಯೋಳ್ತೀನ್, ಪೋಲೀಸ್ನೋರಿಗೆ ತಿಳ್ಸಿ ನಿಂಗೆ ನೇಣಾಕಿಸ್ತೀನಿ"[1] ಎಂದು ಕೂಗಾಡುತ್ತಾಳೆ. ಇದರಿಂದಾಗಿ ತಿಮ್ಮವ್ವ ಶೀಲದೊಂದಿಗೆ ತನ್ನ ಪ್ರಾಣವನ್ನು ಕಳೆದುಕೊಳ್ಳಬೇಕಾಗುತ್ತದೆ.

ತಿಮ್ಮವ್ವನ ತಮ್ಮ ಕರಿಯ ಅಕ್ಕನನ್ನು ಹುಡುಕಿಕೊಂಡು ತೋಟದ ಮನೆಗೆ ಬಂದಾಗ ಗೌಡ ತನ್ನ ಮನೆಯ ನಾಯಿಯನ್ನು ಅವನ ಮೇಲೆ ಛೂ ಬಿಡುತ್ತಾನೆ. ನಾಯಿಯ ದಾಳಿಗೆ ಕರಿಯ ಬಲಿಯಾಗುತ್ತಾನೆ. ಈ ಎರಡು ಕೊಲೆ ಪ್ರಕರಣಗಳನ್ನು ಮುಚ್ಚಿ ಹಾಕಲು ಗೌಡ ತನ್ನ ಆಪ್ತನಾದ ರುದ್ರಯ್ಯನ ಕೈಯಿಂದ ಐದುನೂರು ರೂಪಾಯಿಗಳನ್ನು ಚಿಕ್ಕೀರಯ್ಯನ ಜೇಬಿಗೆ ಹಾಕಿಸಿ ಸಮಾಧಾನಪಡಿಸುತ್ತಾನೆ. ರಾಮು ಪತ್ರಿಕೆಯಲ್ಲಿ ಪ್ರಕಟವಾದ 'ನಾಯಿ ಕಡಿದು ಸಾವು' ಶಿರೋನಾಮೆಯಲ್ಲಿ "ಹೆಬ್ಬೂರಿಗೆ ಸಮೀಪದ ಕೊಪ್ಪಲಿನಲ್ಲಿ ಚಿಕ್ಕೀರಯ್ಯನ ಮಗ ಎಂದು ಹೇಳಲಾದ ಕರಿಯ ಎಂಬ ಬಾಲಕನನ್ನು ಬಲಿತ ನಾಯಿಯೊಂದು ಕಚ್ಚಿದ್ದರಿಂದ ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲೆ ಮೃತಪಟ್ಟ"[2] ಎಂದು ಸುದ್ಧಿಯಾಗುತ್ತದೆ.

ಇಬ್ಬರು ಮಕ್ಕಳ ಸಾವಿನಿಂದ ಕಂಗೆಟ್ಟ ಚಿಕ್ಕೀರಯ್ಯ ತನ್ನ ದುರಾವಸ್ಥೆಯಿಂದ ಬೇಸತ್ತು ತನ್ನ ಉಳಿದ ಇಬ್ಬರು ಮಕ್ಕಳಿಗೂ, ಹೆಂಡತಿಗೂ ವಿಷವನ್ನು ಕುಡಿಸಿ ತಾನೂ ಸಾಯಬೇಕು ಎನ್ನುವಷ್ಟರಲ್ಲಿ ತನ್ನ ಹಳ್ಳಿಗೆ ಬಂದು ಆಗಬಹುದಾದ ಅನಾಹುತವನ್ನು ರಾಮು ತಪ್ಪಿಸಿದ. ತನ್ನ ಕುಟುಂಬದ ದುರಾವಸ್ಥೆಯನ್ನು ಕೇಳಿ ತಿಳಿದುಕೊಂಡ ರಾಮುವಿಗೆ ತನ್ನ ತಂಗಿ ಕಾಣೆಯಾದ ವಿಚಾರ ಸೋಜಿಗವೆನಿಸಿ ಪೋಲೀಸರಿಗೆ ದೂರು ನೀಡುತ್ತಾನೆ. ರಾಮುವಿನ ಮುಖವನ್ನು ನೋಡಿದಾಗಲೆಲ್ಲ ರಂಗೇಗೌಡನಿಗೆ ಅಳುಕುಂಟಾಗುತ್ತದೆ. ಆದರೆ ಇದರಿಂದ ಯಾವುದೇ ಪ್ರತಿಫಲ ದೊರೆಯದೆ ಇದ್ದಾಗ ಸರ್ಕಾರವು 'ಜ್ಯೂಲಿ' ಎಂಬ ಗುಪ್ತದಳದ ಅಧಿಕಾರಿಣಿಯನ್ನು ಕೊಲೆ ಪತ್ತೆಗಾಗಿ ನೇಮಿಸುತ್ತದೆ. ಜ್ಯೂಲಿ ಒಬ್ಬ ನರ್ಸ್ ಮಾರುವೇಷದಲ್ಲಿ ಬಂದಾಗಲೂ ರಂಗೇಗೌಡನ ಕಾಮಪಿಪಾಸುತನಕ್ಕೆ ಒಳಗಾಗಿ ಕೊಲೆಯ ವಿವರಗಳನ್ನು ತಿಳಿದುಕೊಳ್ಳುತ್ತಾಳೆ. ಈ ಡಿಟೆಕ್ಟಿವ್ ತಂತ್ರವನ್ನು ಲೇಖಕರು ನೂತನವಾಗಿ ಬಳಸಿಕೊಂಡಿದ್ದಾರೆ. ಗೌಡನ ಋಣಬಾರದಿಂದ ತಪ್ಪಿಸಿಕೊಳ್ಳಲು ರಾಮು ಹೊಲವನ್ನು ಮಾರಿ ಚಿಕ್ಕೀರಯ್ಯ ಮಾಡಿದ ಸಾಲವನ್ನೆಲ್ಲಾ ತೀರಿಸಿ ಮನೆಯ ಸ್ಥಿತಿ ಸುಧಾರಿಸುತ್ತಾನೆ.

ಶಿಕ್ಷಣ, ಸಂಘಟನೆ, ಹೋರಾಟ ಈ ಮೂರರಿಂದ ಯಾವುದು ಅಸಾಧ್ಯವಲ್ಲ ಎಂಬುದನ್ನು ರಾಮು ಸಾಧಿಸಿ ತೋರಿಸುತ್ತಾನೆ. ಇದು ದಲಿತ ಸಮುದಾಯದಲ್ಲಿ ಆಗಬೇಕಾದ ಬದಲಾವಣೆ. ದಲಿತ ಜನಾಂಗಕ್ಕೆ ದೊರೆಯಬೇಕಾದ ಸವಲತ್ತುಗಳಿಗಾಗಿ ನಿರಂತರ ಹೋರಾಟದ ಅನಿವಾರ್ಯತೆಯನ್ನು ಈ ಕಾದಂಬರಿ ಚಿತ್ರಿಸುತ್ತದೆ. ಊರಿನ ಪ್ರಮುಖ ಮಲ್ಲಣ್ಣನ ಸಲಹೆಯಂತೆ ಊರಿನ ಯುವಕರನ್ನೆಲ್ಲ ಸೇರಿಸಿ ರೈತ ಸಂಘವನ್ನು ಕಟ್ಟಿ, ಜಿಲ್ಲಾಧಿಕಾರಿಗಳನ್ನು ಕರೆಸಿ ಸಂಘದ ಉದ್ಘಾಟನೆ ಮಾಡಿಸಿದ. "ಒಂದೇ ವಾರದಲ್ಲಿ ಸಂಘಕ್ಕೆ ತನ್ನದೆ ಆದ ಬೈಲಾ ತಯಾರಿಸಿಕೊಂಡರು. ಹದಿನಾರರಿಂದ ಇಪ್ಪತ್ತೈದರ ಬಿಸಿ ರಕ್ತದ ಯುವಕರನ್ನು ಸದಸ್ಯರನ್ನಾಗಿಸಿಕೊಂಡರು. ಮಲ್ಲಣ್ಣನನ್ನೇ ಸಂಘಕ್ಕೆ ಅಧ್ಯಕ್ಷನನ್ನಾಗಿ ಆಯ್ಕೆಮಾಡಿ, ತಿಮ್ಮೇಗೌಡನ ಮಗ ಗೋವಿಂದನನ್ನು ಕಾರ್ಯದರ್ಶಿಯನ್ನಾಗಿ ನೇಮಿಸಿದರು. ನಾಲ್ಕೈದು ಮಂದಿ ವೃದ್ಧರನ್ನು ಪೋಷಕ ಸದಸ್ಯರನ್ನಾಗಿ ತೆಗೆದುಕೊಂಡು ರಾಮು ಸಾಮಾನ್ಯ ಸದಸ್ಯನಾಗಿ ಉಳಿದು ಮಾರ್ಗದರ್ಶನ ಮಾಡಿದ"[3]

ಹೀಗೆ ಕಾದಂಬರಿಯು ಒಂದು ಕಡೆ ಗ್ರಾಮೀಣ ರೈತನ ಬದುಕನ್ನು ಚಿತ್ತರಿಸುತ್ತಾ ಜೊತೆಗೆ ಪತ್ತೆದಾರಿ ಕಾದಂಬರಿಯ ಹೊಸ ಅಂಶಗಳನ್ನು ಒಳಗೊಂಡಿದೆ. ರೈತ ಪಡುವ ಬವಣೆ, ಶೋಷಣೆಗಳ ಚಿತ್ರಣ,

ಪ್ರತಿಯೊಂದು ನಕ್ಷತ್ರಗಳ ಮೇಲೆ ಜನಪದರು ಇರಿಸಿರುವ ನಂಬಿಕೆ, ಕಟ್ಟಿರುವ ಗಾದೆಗಳ ನಿರೂಪಣೆಯನ್ನು ಈ ಕೃತಿ ಒಳಗೊಂಡಿದೆ.

**'ಶಾಪ'**

ಅಜ್ಜಂಪುರ ಜಿ ಸೂರಿಯವರ ಮತ್ತೊಂದು ಸ್ವರಚಿತ ಸಾಮಾಜಿಕ ಕಾದಂಬರಿ 'ಶಾಪ'. ಈ ಕೃತಿ 1990ರಲ್ಲಿ ಹೇಮಂತ ಸಾಹಿತ್ಯ ಪ್ರಕಾಶನದಿಂದ ಪ್ರಕಟಗೊಂಡಿದೆ. ಇದು ಒಟ್ಟು 153 ಪುಟಗಳನ್ನು ಒಳಗೊಂಡಿದೆ. ಈ ಕಾದಂಬರಿಯಲ್ಲಿ ಬರುವ ಪ್ರಮುಖ ಪಾತ್ರಗಳೆಂದರೆ ಸುಬ್ರಾಯ–ಗೌರಮ್ಮ–ಚಂದ್ರಿ, ಭೈರ–ಲಚ್ಚಿ, ಉಗ್ರಪ್ಪ, ಮಾರಣ್ಣ ವಿದ್ಯಾವಂತ, ಹೊನ್ನೂರಪ್ಪ, ತಿಮ್ಮ, ರಂಗ, ಪುಟ್ಟ–ನಿಂಗಿ ಮುಂತಾದವು.

ಈ ಕಾದಂಬರಿ ಕಳ್ಳತನದ ಪ್ರಸಂಗದಿಂದ ಪ್ರಾರಂಭವಾಗುತ್ತದೆ. ಭೈರ ಮತ್ತಿತರರು ರಾತ್ರಿ ಸಮಯದಲ್ಲಿ ಸುಬ್ರಾಯರ ತೋಟದಲ್ಲಿ ತೆಂಗಿನಕಾಯಿ ಕದಿಯಲು ಹೋಗಿರುತ್ತಾರೆ. ಭೈರ ತೆಂಗಿನ ಮರವನ್ನು ಹತ್ತುತ್ತಾನೆ. ಇತರರು ಕಾಯಿಗಳನ್ನು ಸುಲಿದು ಸಾಗಿಸುವ ಹೊಂಚಿನಲ್ಲಿರುತ್ತಾರೆ. ಅದೇ ಸಂದರ್ಭದಲ್ಲಿ ತೋಟಕ್ಕೆ ಬಂದ ಸುಬ್ರಾಯ ಮತ್ತು ಉಗ್ರಪ್ಪ ಟಾರ್ಚ್ ಬಿಟ್ಟು ಗುಂಡು ಹಾರಿಸುತ್ತಾರೆ. ಸುಬ್ರಾಯ ಹಾರಿಸಿದ ಗುಂಡು ಭೈರನ ದೇಹವನ್ನು ಹೊಕ್ಕುತ್ತದೆ. ಇದರಿಂದ ಮರದ ಮೇಲಿಂದ ನೇರವಾಗಿ ಕಾಯಿ ಸುಲಿಯಲು ನೆಟ್ಟಿದ್ದ ದಸಿಯ ಮೇಲೆ ಬಿದ್ದು ಪ್ರಾಣ ಬಿಡುತ್ತಾನೆ. ಅವನೊಂದಿಗಿದ್ದ ಮತ್ತಿಬ್ಬರು ಪ್ರಾಣ ಉಳಿಸಿಕೊಳ್ಳಲು ಸುಬ್ರಾಯ ಮತ್ತು ಉಗ್ರಪ್ಪನೊಂದಿಗೆ "ಕ್ಷಮ್ಸಿ ನಮ್ಮಪ್ಪಾ! ತೆಪ್ಪಾಯ್ತು! ನಿಮ್ಮ ಕಾಲಿಗೆ ಬೀಳುತ್ತೇವೆ ನಮ್ಮನ್ನು ಸಾಯಿಸ್ಬೇಡಿ, ನಿಮ್ ದಮ್ಮಯ್ಯ, ಇನ್ನೊಂದಪ ಕಳ್ತನ ಮಾಡಕಿಲ್ಲ, ನಾವು ಬಡವ್ರು ಬುದ್ದೀ, ಏನೋ ಹೊಟ್ಟೇಗಿಲ್ದೆ ತೆಪ್ ಮಾಡ್ಬಿಟ್ವಿ ನಾವ್ ನಮ್ ಮಕ್ಳೊಂದಿಗ್ರು, ನಮ್ಮೆಲ್ಡ ಮಕ್ಳು ಪರದೇಶಿ ಆಗ್ತಾವೆ ನನ್ನಪ್ಪ"[4] ಎಂದು ಅಲವತ್ತುಕೊಂಡಾಗ ಉಗ್ರಪ್ಪ ಭೈರ ಸತ್ತ ಸುದ್ದಿಯನ್ನು ಅವನ ಹೆಂಡತಿ ಲಚ್ಚಿಗೆ ತಿಳಿಸಿ, ಆಕೇನ ಸಮಾಧಾನ ಮಾಡೋ ಕೆಲ್ಸ ನಿಮ್ಮದು. ಅಲ್ಲದೆ ಬೆಳಗಾಗೋದ್ರೊಳ್ಗೆ ಈ ಹೆಣ ಸುಡಬೇಕು ನೀವೇನಾದರೂ ಕೇರಿ ತಲೆ ತಿರುಕರ ಮಾತು ಕೇಳಿ ತಿರುಗಿ ಬಿದ್ದರೆ ನಿಮ್ಮ ತಲೆ ಹಾರಿಸಿಬಿಡುತ್ತೇನೆ ಎಂದು ಬೆದರಿಸಿ ಭೈರನ ಹೆಣವನ್ನು ಸುಡುವಂತೆ ಮಾಡುತ್ತಾರೆ. ಹಾಗೂ ಭೈರನ ಹೆಂಡತಿಯನ್ನು ಸಮಾಧಾನ ಮಾಡಿ ಹೇಗಾದರೂ ಮಾಡಿ ಆಕೆಯನ್ನು ಕರೆದುಕೊಂಡು ಮನೆಕಡೆ ಬಂದರೆ ಧನ–ದವಸ ಕೊಡುವುದಾಗಿ ಆಶ್ವಾಸನೆ ನೀಡುತ್ತಾನೆ.

ಸಾಮಾನ್ಯವಾಗಿ ಹಸಿವು ಮತ್ತು ಅತಿಯಾಸೆಯಿಂದ ಕಳ್ಳತನ ಮಾಡುವುದು ಸಹಜ. ಇಲ್ಲಿ ಭೈರನಿಗೆ ಯಾವ ಅನಿವಾರ್ಯವಿತ್ತು ಎಂಬುದನ್ನು ಗಮನಿಸಿದಾಗ ಹಸಿವಿನ ಉದ್ದೇಶಕ್ಕಾಗಿ ಕಳ್ಳತನ ಮಾಡಲು ಹೋಗಿ ಪ್ರಾಣ ಬಿಡುತ್ತಾನೆ. ಇಂತಹದ್ದೆ ಪ್ರಸಂಗ ದೇವನೂರ ಮಹಾದೇವ ಅವರ ಒಡಲಾಳ ಮತ್ತು ಕುಂ. ವೀರಭದ್ರಪ್ಪನವರ ದೇವರ ಹೆಣ ಕಥೆಯಲ್ಲಿ ಕಾಣಬಹುದಾಗಿದೆ.

'ಶಾಪ' ಕಾದಂಬರಿ ಶೋಷಣೆಯ ಹಲವಾರು ಮುಖಗಳನ್ನು ಪರಿಚಯಿಸುತ್ತದೆ. ಸ್ತ್ರೀ ಭೋಗದ ವಸ್ತುವೆಂದು ತಿಳಿಯುವ ಪುರುಷ ಪ್ರಧಾನ ಸಮಾಜ ಬಹುಪತ್ನಿತ್ವ ಪದ್ಧತಿಯನ್ನು ಸಾಮಾಜಿಕ ಒಪ್ಪಿಗೆಯೆಂಬಂತೆ ಭಾವಿಸುತ್ತಲೇ ವಿವಾಹವಾಗುತ್ತಾರೆ. ಗೌರಮ್ಮನಿಗೆ "ರಾಯರು ತನ್ನನ್ನು ನೋಡಲು ಬಂದಾಗಿನ ಪ್ರಸಂಗದ ಚಿತ್ರ ಕಣ್ಣೆದುರು ಬಂದು, ಸುಬ್ಬರಾಯರು ಜಮೀನ್ದಾರೆಂದು, ಮೊದಲನೇ ಹೆಂಡತಿ ತೀರಿಕೊಂಡಳೆಂದು, ಮಕ್ಕಳಿಲ್ಲದ ಕಾರಣ ಆತನ ಕೈ ಹಿಡಿದು ತಾನು ಮಹಾರಾಣಿಯಂತಿರ ಬಹುದೆಂದು ಹಿರಿಯರು ಉಪದೇಶ ಮಾಡಿದರು. ಎತ್ತರದ ನಿಲುವಿನ ಎಣ್ಣೆಗಂಪು ಬಣ್ಣದ ರಾಯರ ಒಳಪು ಕಣ್ಣುಗಳು ಮಾತ್ರ ಆಕರ್ಷಕವಾಗಿದ್ದವು, ಗಂಭೀರ ಮುಖಮುದ್ರೆಯ ರಾಯರು ಯಾವಾಗಲೂ ಬಿಳಿ ಧೋತ್ರ ಮೇಲೆ ಅಷ್ಟೇ ಬಿಳಿಯ ರೇಷ್ಮೆಯ ಉತ್ತರಿ ಧರಿಸುತ್ತಿದ್ದರು. ಜಾತಕಗಳು ಕೂಡಿ

ಬಂದರೂ ವಯಸ್ಸುಗಳು ಕೂಡುವಂತಿರಲ್ಲಿಲ. ತಂದೆ ವಯಸ್ಸಿನ ಗಂಡಿಗೆ ಮಗಳ ವಯಸ್ಸಿನ ಹುಡಿಗಿ! ತನ್ನ ಇಷ್ಟಗಳನ್ನು ಯಾರು ಕೇಳುವಂತಿರಲಿಲ್ಲ. ಈ ಸಂಬಂಧ ಬಿಟ್ಟರೆ ಬೇರೆ ಸಂಬಂಧ ಸಿಗುವುದಿಲ್ಲ ಎಂಬ ಭೀತಿ ಕಾಡುತ್ತಿತ್ತು. ತವರುಮನೆ ಬಿಟ್ಟು ಗಂಡನ ಮನೆ ಸೇರಿದ ಮೇಲೆ ರಾಯರ ಪ್ರಲಾಪದ ಕತೆಗಳನ್ನು ಅವರಿವರ ಬಾಯಿಂದ ಕೇಳಿ ತಿಳಿದು ನಿಟ್ಟುಸಿರು ಬಿಟ್ಟಳು"[5]

ಹೀಗೆ ವೈವಾಹಿಕ ಸಂಬಂಧಗಳು ಸಾಂಪ್ರಾದಯಿಕ ಸಮಾಜದಲ್ಲಿ ಗಂಡಿನ ಕೀರ್ತಿ, ಪ್ರತಿಷ್ಠೆಗಳ ಮೇಲೆ ನಿರ್ಧರಿಸುವ ಅಂಶಗಳಾಗುವುದನ್ನು ಗಮನಿಸಬಹುದೆ ಹೊರತು ಹೆಣ್ಣಿನ ದೃಷ್ಟಿಯಿಂದ ಗೌಣವಾಗಿ ತೋರುತ್ತದೆಯೆಂಬುದನ್ನು ಗೌರಮ್ಮನ ಮದುವೆ ನಿಲುವಿನಲ್ಲಿ ಗಮನಿಸಬಹುದು.

ಪರುಷ ಪ್ರಧಾನ ಸಮಾಜದಲ್ಲಿ ಪರುಷ ಏನು ಮಾಡಿದರೂ ಅದು ಸರಿ ಎಂಬುದನ್ನು ಒಪ್ಪಿಕೊಳ್ಳುವ ನಿಲುವುಗಳನ್ನು ಈ ಕಾದಂಬರಿಯಲ್ಲಿ ಕಾಣಬಹುದು. ಅದರಲ್ಲೂ ಊರ ಗೌಡನೆಂದರೆ ಸಾಮಾನ್ಯವೇ? ಅಧಿಕಾರ, ದರ್ಪ, ಆಳು, ಕಾಳುಗಳು ತಲೆತಗ್ಗಿಸಲೇಬೇಕು. ಹಾಗೆಯೆ ಗೌಡ ಮನೆಯಲ್ಲಿ ಹೆಂಡತಿಯಿದ್ದರೂ ಬೇರೆಯವರ ಹೆಂಡತಿಯರನ್ನು ವ್ಯಾಮೋಹಿಸುವುದು ಆತನ ವಿವೇಚನೆಗೆ ಸರಿಯೆನಿಸಿತ್ತೂ ಏನೋ? ಊರಲ್ಲಿ ಆಸ್ತಿರಹಿತರ, ವಿಧವೆಯವರ, ಅನಾಥ ಹೆಣ್ಣುಮಕ್ಕಳಿಗೆ ತಾನೇ ಗಂಡನಾಗಿ, ಯಜಮಾನನಾಗಿ ಪರಿವರ್ತನೆಯಾಗುತ್ತಾನೆ. ಇದೇ ಮಾತನ್ನು ಲೇಖಕರು ಹೀಗೆ ಉಲ್ಲೇಖಿಸುತ್ತಾರೆ. "ಎಷ್ಟೆಷ್ಟೋ ಗಂಡ ಸತ್ತವರ ಉಬ್ಬು ತಗ್ಗುಗಳಿಗೆ ಒಡೆಯನಾಗಿ ಅವರ ಆಸ್ತಿ ಪಾಸ್ತಿಗಳಿಗೆ ವಾರಸುದಾರನಾಗಿದ್ದುದು ಉಂಟು. ರಾಯರ ಇಂಥ ದಬ್ಬಾಳಿಕೆ ಸ್ವತಂತ್ರ ಪೂರ್ವದಲ್ಲಿ ರಾರಾಜಿಸಿದ್ದೇ ಹೆಚ್ಚು. ದೇಶ ಸ್ವತಂತ್ರವಾದ ಮೇಲೆ ಹುಲಿ ಇಲಿಯಾಗಿ, ಇಲಿ ಹುಲಿಯಾಯಿತು. ರಾಯರು ತಮ್ಮ ಬುದ್ದಿಯನ್ನು ಬೇರೊಂದು ರೀತಿ ಪಳಗಿಸಿಕೊಂಡು ನುಸುಗುನ್ನಿ ಕಾಯಿಯಂತ ಅಪ್ಪಟ ಬುದ್ದಿಜೀವಿಯಾಗಿ ಉಳಿದುಕೊಂಡಿದ್ದರು"[6]

ಶೋಷಣೆಯೆಂಬುದು ಜನರ ದೈವ, ಧರ್ಮ, ಆಚರಣೆ, ನಂಬಿಕೆಗಳ ಮೇಲೆ ನಿಂತಿರುವಂತದು. ಇವುಗಳನ್ನು ಆಳುವ ವರ್ಗ ತಮ್ಮ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಿದರೆ, ಪುರೋಹಿತವರ್ಗ ದೇವರ ಹೆಸರಿನಲ್ಲಿ ಹೊಟ್ಟೆಯನ್ನು ಹೊರೆದುಕೊಳ್ಳುವ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತದೆ ಎಂಬುದನ್ನು ಗ್ರಾಮದಲ್ಲಿ ನಡೆಯುವ ಸಿಡಿಯೇರುವ ಕಾರ್ಯದಲ್ಲಿ ಕಾಣಬಹುದು. ಇದಕ್ಕೆ ದಲಿತ ಹೆಣ್ಣುಮಕ್ಕಳೇ ಬೇಕು. ಮೇಲ್ವರ್ಗದವರು ಬೇಕಾಗಿಲ್ಲ. ಇಂತಹ ಅನೇಕ ಕಾರ್ಯಗಳಿಗೆ ಬೆಂಬಲವಾಗಿರುವವನು ಉಗ್ರಪ್ಪ. ಈ ಉಗ್ರಪ್ಪನ ವ್ಯಕ್ತಿತ್ವವನ್ನು ಕುರಿತು ಲೇಖಕರು ಹೀಗೆ ವಿವರಿಸುತ್ತಾರೆ. "ಉಗ್ರಪ್ಪ ಗ್ರಾಮದೇವತೆ ಕಿರಾಳಮ್ಮನ ಪೂಜಾರಿ. ತಲೆಮಾರಿನಿಂದ ತಲೆಮಾರಿಗೆ ಪೂಜಾರಿಕೆ ಹಸ್ತಾಂತರವಾಗಿ ಬಂದದ್ದು. ಉಗ್ರಪ್ಪನದು ಎಂಥವರ ಎದೆಯಲ್ಲೂ ಭಯ ಹುಟ್ಟಿಸುವಂಥಾ ಆಕಾರ. ದಪ್ಪತಲೆ, ಬಾಬಾಗಳಿಗಿದ್ದಂತೆ ನಿಗಿರಿ ನಿಂತ ಎರಡಂಗುಲ ಉದ್ದದ ತಲೆಗೂದಲು, ದಪ್ಪ ಹುಬ್ಬು, ಸದಾ ಕೆಂಪಗಿರುವ ದಪ್ಪ ಕಣ್ಣುಗಳು, ಪುಟ್ಬಾಲಿನಂತೆ ಊದಿಕೊಂಡ ದುಂಡು ಮುಖ, ಮೊಂಡುಮೂಗು, ಸದಾ ಎಲೆ ಅಡಿಕೆಯಿಂದ ಕೀಚಾದ ಹಲ್ಲು, ದಪ್ಪನೆಯ ಕಪ್ಪು ತುಟಿಗಳು, ಎತ್ತರಕ್ಕೆ ಮೀರಿದ ಮೈ ನಡುವೆ ಚಿಕ್ಕ ಗುಡಾಣ ಸೈಜಿನ ಹೊಟ್ಟೆ, ಎದೆಯಲ್ಲಿ ಹೂತು ಹೋಗಿರುವಂಥ ಕತ್ತು ಯಾವಾಗಲೂ ಮಾಸಿದ ಕಾಲರಿಲ್ಲದ ಷರಟು, ಪಂಚೆ ಒಟ್ಟಾರೆ ಹೇಳಬೇಕೆಂದರೆ ಕಲಿಯುಗ ದೈತ್ಯ, ಸ್ವಭಾವವೂ ಅಷ್ಟೇ"[7]

ದೇವರು-ದೈವತ್ವದ ಕಲ್ಪನೆ ಬಂದಾಗ ಗ್ರಹಿಕೆಗಳಿಗೆ ಅನುಗುಣವಾಗಿ ನಂಬಿಕೆ, ಭಕ್ತಿಯ ಸ್ವರೂಪ ಮುಂತಾದವುಗಳು ಬೆಳೆಯುತ್ತವೆ. ಊರು ಬೇಳೆಯುತ್ತಾ ಹೋದಂತೆ ಕೋಮಿಗೊಂದು, ಬೀದಿಗೊಂದು ದೇವರುಗಳು ಹುಟ್ಟಿಕೊಂಡಿದ್ದವು. ಅದರಲ್ಲೊಂದು ಈಶ್ವರ ದೇವರಗುಡಿ. ಅದರ

ಪೂಜಾರಿ ವೃದ್ಧ. ಹೆಗಲ ಮೇಲಿದ್ದ ತುಂಬಿದ ಬಿಂದಿಗೆ ಇಳಿಸಿಕೊಳ್ಳುವ ಪ್ರಯತ್ನದಲ್ಲಿದ್ದಾಗ ಅದು ಆಕಸ್ಮಿಕವಾಗಿ ಜಾರಿ ಶಿವಲಿಂಗದ ಅಂಚಿಗೆ ಬಿದ್ದು ಶಿವಲಿಂಗ ಭಿನ್ನವಾಯಿತು. ಅಂದಿನಿಂದ ಪೂಜೆಯೂ ನಿಂತುಹೋಗಿತ್ತು. ಆ ಸಂದರ್ಭದಲ್ಲಿ ಹೊಸ ಶಿವಲಿಂಗ ಪ್ರತಿಷ್ಠಾಪನೆಗಾಗಿ ಹಣವನ್ನು ಜೋಡಿಸಿಕೊಂಡು ಪ್ರತಿಷ್ಠಾಪನೆಗೆ ಮುಂದಾದಾಗ ಎಲ್ಲರ ಮನಸ್ಸಿನಲ್ಲೂ ಭಯವುಂಟಾಗುತ್ತದೆ. ಇಲ್ಲಿ ಶ್ರೇಷ್ಠತೆಯ ಪ್ರಶ್ನೆ ಬಂದಾಗ ಅದು ಮತಾಂಧತೆಯ ಸ್ವರೂಪವನ್ನು ಪಡೆದುಕೊಂಡು ಪರಿಹರಿಸಲಾರದ ಪ್ರಶ್ನೆಯಾಗಿ ಉಳಿಯುತ್ತದೆ. ಅದರ ಹಿನ್ನೆಲೆಯನ್ನು ಕಾದಂಬರಿಕಾರ ಹೀಗೆ ನಿರೂಪಿಸುತ್ತಾನೆ. "ಪ್ರತಿಷ್ಠಾಪನ ಕಾರ್ಯ ಸುಲಭವಲ್ಲ ಅದೇನಿದ್ದರೂ ತನ್ನಿಂದ ಸಾಧ್ಯ. ಏಕೆಂದರೆ ಮಹಾಗಣಪತಿ, ಪುಣ್ಯಾಹನಂದಿ, ಪಂಚ ಬ್ರಹ್ಮಕಲಶ, ಅಷ್ಟದಿಕ್ಪಾಲಕ, ನವಗ್ರಹಪೂಜೆ ಮುಂತಾದ ಪೂಜೆಗಳನ್ನೆಲ್ಲಾ ಮಾಡಿ ಪ್ರತಿಷ್ಠಾಪಿಸೋದಕ್ಕೆ ನನ್ನನ್ನು ಬಿಟ್ರೆ ಈ ಪ್ರಾಂತ್ಯದಲ್ಲಿ ಮತ್ತಾರಿದ್ದಾರೆ? ಇವನ್ನೆಲ್ಲಾ ಶಾಸ್ತ್ರೀಯವಾಗಿ ಕಲಿತವನು ನಾನು. ಆದ್ದರಿಂದ ಇದರ ಆಗ್ರ ಪಟ್ಟ ನನಗೆ ಸೇರಬೇಕು"[8] ಈ ಮಾತುಗಳನ್ನು ಗಮನಿಸಿದಾಗ ಬ್ರಾಹ್ಮಣ್ಯಕೆ ಎನ್ನುವುದು ಹೇಗೆ ರಕ್ತಗತವಾದ ಹಾಗೆ ಭಾವಿಸಿದ್ದಾರೆನ್ನುವುದು ಸ್ಪಷ್ಟವಾಗುತ್ತದೆ.

ಹೊನ್ನೂರಪ್ಪ ಈ ಎಲ್ಲಾ ಸಂಗತಿಗಳನ್ನು ಗಮನಿಸುತ್ತಲೇ ಊರಿನ ಹಿರೀಕರಿಗೆ ತನ್ನ ನಿವೇದನೆಯನ್ನು ಹೀಗೆ ಒಪ್ಪಿಸುತ್ತಾನೆ. "ನೊಂದವರ ಶಾಪ ನಿಮ್ಮನ್ನ ಬಿಡೋದಿಲ್ಲ. ಒಂದ್ ಮಾತು ನೆನಪಿಟ್ಕೋಳ್ಳಿ, ಮನುಷ್ಯ ಕೋಲ್ನಲ್ಲಿ ಹೊಡದ್ರೆ ಸದ್ದಾಯ್ತದೆ. ದೇವರು ಹೊಡೆಯೋ ಕೋಲ್ನಲ್ಲಿ ಸದ್ದೇ ಬರಾಕಿಲ್ಲ. ಆದ್ರೆ ಹಲ್ಲೆಲ್ಲಾ ಚೂರಾಗಿ ಹೋಗ್ತಾವೆ ಅಷ್ಟೆ. ಆ ರುಚಿ ಅನುಭೌಸಿದ ಮ್ಯಾಕೆ ಯಾರಿಗಾದ್ರೂ ನದರಾಗೋದು"[9] ಹೊನ್ನೂರಪ್ಪನ ಮಾರ್ಮಿಕವಾದ ಮಾತುಗಳು ಸಂಪ್ರದಾಯಸ್ಥ ಜಡ್ಡು ಹಿಡಿದ ಮನಸ್ಸುಗಳಿಗೆ ಒಪ್ಪುವುದಿಲ್ಲ.

ದೇವರ ಪ್ರತಿಷ್ಠಾಪನೆ ಯಾರು ಮಾಡಿದರೇನು ಎಲ್ಲವೂ ಒಪ್ಪಿತವೇ ಎನ್ನುವ ನಿಲುವು ಹೊನ್ನೂರಪ್ಪನದು. ಆ ನಿಲುವು ಹೀಗಿದೆ. "ನೀವೆಲ್ಲಾ ದೊಡ್ಮನುಸ್ರು, ಶಿವಲಿಂಗ ಒಡದೈತೆ ನಿಜ ಅವನ್ನ ಕೀಳೋಕೆ ಯಾರಾದ್ರೇನು? ಹೊಸದು ಮಾಡ್ಸೋಕೆ ಯಾರಾದ್ರೇನು? ನಟ್ಟು ಪೂಜೆ ಮಾಡೋಕೆ ಯಾರನ್ಯಾಕೆ ಕೇಳ್ಬೇಕು? ಅದಕ್ಕಾಗಿ ಒಂದೇ ಪಂಗಡದ ಐದಾರು ಕೋಮಿನವರೆಪ್ಪಾ ಹೊಡೆದಾಟಕ್ಕೆ ತಯಾರಾಗಿ ನಿಂತಿದ್ದೀರಲ್ಲಾ ನಿಮಗೆ ಬುದ್ದೀ ಐತೆ? ಅಮ್ತ ಯಾರೋ ಯೋಳ್ತಾರೆ? ಅಲ್ಲಾ ದೇವಸ್ಥಾನಗಳಿಗೇನು ಈ ಊರಿನಲ್ಲಿ ಬರವೇ ಈ ಕೆಟ್ಟ ದೇವಸ್ಥಾನಗಳನ್ನು ಕಟ್ಟಿ ಜಾತಿಗಳ ಬಲ ಹೆಚ್ಚಿಸುವ ಬದಲು ಶಾಲೆಯನ್ನೂ, ಆಸ್ಪತ್ರೆಯನ್ನೋ ಕಟ್ಟಿಸಿ ಅದು ನಿಜವಾದ ದೇವಸ್ಥಾನ ನಾನು ಬರ್ತೀನಿ"[10] ಎಂದವನೆ ಸೊಂಟಕ್ಕೆ ಬಿಗೊದಿದ್ದ ವಲ್ಲಿಯನ್ನು ಕೊಡವಿಕೊಂಡು ಹೆಗಲಿಗೆ ಹಾಕಿಕೊಳ್ಳುತ್ತಾ ತನ್ನ ಸಂಗಡಿಗರೊಂದಿಗೆ ಬಿರಬಿರನೇ ಹೊರಟೇ ಬಿಟ್ಟ. ಈ ಮಾತಿನಲ್ಲಿ ವೈಚಾರಿಕತೆಯ ನಿಲುವುಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

ವಿದ್ಯಾವಂತ ಯುವಕರು ಯುವ ಸಮಾಜದ ಆಸ್ತಿಯಾಗಿ ದಲಿತಜನಾಂಗದ ಉದ್ದಾರಕ್ಕೆ ನೆರವಾಗಬೇಕಾದ, ವ್ಯಕ್ತಿತ್ವಗಳನ್ನು ರೂಪಿಸುವುದು ಅನಿವಾರ್ಯವಾಗಿದೆ. ಅಂತಹ ಯುವಕರಲ್ಲಿ ಮಾರಣ್ಣನು ಒಬ್ಬ. ಅವನ ತಂದೆ ಅದೇ ಊರಿನವನೆ ಇಡೀ ದೇಶಕ್ಕೆ ಸ್ವಾತಂತ್ರ್ಯ ಬಂದರೂ ಪುರಕ್ಕೆ ಸ್ವತಂತ್ರ್ಯ ಬಾರದಿದ್ದಾಗ ಆ ಊರು ಬಿಟ್ಟು ಪಕ್ಕದ ಹಳ್ಳಿಗೆ ತೆರಳಿ ಸ್ವತಂತ್ರ್ಯದ ಹೊಸ ಗಾಳಿಯಲ್ಲಿ ಉಸಿರಾಡಿದ್ದ. ಚುರುಕು ಬುದ್ಧಿಯವನಾದ ಅವನು ಸರ್ಕಾರದ ಯೋಜನೆಗಳ ಕಡೆ ಗಮನ ಕೊಟ್ಟು ಗಾಂಧಿ ತತ್ವಗಳನ್ನು ಮೈಗೂಡಿಸಿಕೊಂಡು ಮುಂದುವರಿದು 'ಹೊನ್ನೂರಪ್ಪ'ನವರಾಗಿ ಮುಂದೆ ಪಂಚಾಯ್ತಿ ಸದಸ್ಯನಾದ. ಇದು ದಲಿತ ಜನಾಂಗದ ಬದುಕಿಗೆ ಹೊಸ ಬೆಳಕನ್ನು ಮಾರ್ಗದರ್ಶಿಸೂತ್ರವನ್ನು ಹಾಕಿಕೊಡುತ್ತದೆ. ಅಧಿಕಾರ ಇರುವುದು ಹಣಗಳಿಸಲು

ಅಲ್ಲ ಅದು ನಂಬಿದ ಜನರಿಗೆ ಮೂಲಭೂತ ಸೌಲಭ್ಯಗಳನ್ನು ದೊರೆಯುವಂತೆ ಮಾಡುವ ಉದ್ದೇಶವುಳ್ಳದ್ದು ಎಂಬುದನ್ನು ಮಾರ ನಿರೂಪಿಸುತ್ತಾನೆ. ಮಾರ ತನ್ನ ಕೇರಿಯನ್ನು ಸುಧಾರಿಸುವಂತೆ ಮಾಡಲು ಬಿಡಿಓ ಮುಂತಾದ ಮೇಲಧಿಕಾರಿಗಳನ್ನು ಕಂಡು ಕೇರಿಗೆ ಅಗತ್ಯವಾದ ಬಾವಿಯನ್ನು, ಶಿಶುವಿಹಾರವನ್ನೂ ಮಂಜೂರು ಮಾಡಿಸಿದ. ಮಾರನ ಆಗಮನದಿಂದ ಹಟ್ಟಿ ದಿನಕ್ಕೊಂದು ರೀತಿ ಬದಲಾಗುತ್ತಿತ್ತು. ಉಗ್ರಪ್ಪನ ಭಂಟನಾದ ಪುಟ್ಟ ಆ ಹಳ್ಳಿಯ ಮೇಲ್ಜಾತಿಯ ಒಬ್ಬ ಪುಢಾರಿ, ಅವನೊಮ್ಮೆ ಹರಿಜನರು ಉಪಯೋಗಿಸುತ್ತಿದ್ದ ಬಾವಿಯಲ್ಲಿ ಅಂಡು ತೊಳೆದಾಗ ಅದನ್ನು ಲಚ್ಚಿ ವಿರೋಧಿಸುತ್ತಾಳೆ. ಮಾರನೂ ಅವಳ ಬೆಂಬಲಕ್ಕೆ ಬಂದು ಪುಟ್ಟನನ್ನು ಸೌದೆಯಿಂದ ಥಳಿಸಿದ ಪರಿಣಾಮವಾಗಿ ಊರಿನಲ್ಲಿ ಪಂಚಾಯ್ತಿ ಸೇರಿತು. ಲಚ್ಚಿಯನ್ನು ಕರೆದ ಉಗ್ರಪ್ಪ ಮಾರಪ್ಪನ ವಿರುದ್ಧವಾಗಿ ಪಂಚಾಯ್ತಿಯಲ್ಲಿ ಸಾಕ್ಷಿ ಹೇಳಬೇಕೆಂದು ಬೆದರಿಕೆ ಹಾಕಿದರೂ, ಆಕೆ ನಡೆದ ವಿಚಾರವನ್ನು ಪಂಚಾಯ್ತಿಯಲ್ಲಿ ಹೇಳುತ್ತಾಳೆ. ಇದರಿಂದ ಪುಟ್ಟ ಮತ್ತು ಉಗ್ರಪ್ಪ ಅವಮಾನಕ್ಕೊಳಗಾಗುತ್ತಾರೆ.

ಊರಿನಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಆಗಮಿಸುವಂತಾಯಿತು ಸುಬ್ರಾಯರು ಹಟ್ಟಿಯಲ್ಲಿ ಆಗುತ್ತಿರುವ ಅಭಿವೃದ್ಧಿ ಕಾರ್ಯಗಳಿಗೆಲ್ಲಾ ತಾವೇ ಕಾರಣ ಎಂದು ಹೇಳಿಕೊಳ್ಳುತ್ತಾರೆ. ಬಾವಿ ಕಂಟ್ರಾಕ್ಟನ್ನು ಉಗ್ರಪ್ಪನಿಗೆ ನೀಡಬೇಕೆಂದು ಬಿಡಿಓ ಅವರ ಬಳಿ ಕೇಳಿಕೊಂಡಾಗ ಅವರು ಅದಕ್ಕೆ ಒಪ್ಪುತ್ತಾರೆ. ಊರಿಗೆ ಮಂತ್ರಿಗಳು ಬರುತ್ತಾರೆಂದಾಗ ಮಾರ ಊರನ್ನು ಸ್ವಚ್ಚಗೊಳಿಸುವ ಕಾರ್ಯಕ್ಕೆ ಮುಂದಾದ. ತಮ್ಮೊಡನೆ ಮೇಲ್ಜಾತಿಯವರೂ ಕೈಜೋಡಿಸಬೇಕೆಂದಾಗ, ಅದಕ್ಕೆ ಬಿಡಿಓರವರು ಮತ್ತೇನೂ ಹೇಳಲಾರದೇ ಒಪ್ಪಿಕೊಳ್ಳಲೇಬೇಕಾಗುತ್ತದೆ.

ಮಾರ ತನ್ನ ದಲಿತ ಜನಾಂಗದ ಮೇಲೆ ಮೇಲ್ಜಾತಿಯವರು ಮಾಡುತ್ತಿದ್ದ ಅತ್ಯಾಚಾರಗಳನ್ನೆಲ್ಲಾ ವಿರೋಧಿಸಿದ. ತಮ್ಮ ಕುತಂತ್ರಕ್ಕೆಲ್ಲಾ ಮಾರ ಅಡ್ಡಗೋಡೆಯಾಗಿ ನಿಂತಾಗ ರಾಯರಿಗೆ ಮಾರನ ಹೆಸರು ಕೇಳಿದರೆ ಬೆಚ್ಚುವಂತಾಗುತ್ತಿತ್ತು. ಗೌಡರಿಗೆ "ಕಳ್ಳನ ಮನಸ್ಸು ಹುಳ್ಳುಳ್ಳಗೆ" ಎಂಬಂತೆ.

ಮಾರ ತನ್ನ ಕುಲಬಾಂಧವರಿಗೆ ಬೇಸಾಯದ ಬದುಕಿನಲ್ಲೂ ಮಾರ್ಗದರ್ಶನ ನೀಡಿದ. ಮುದಿ ಪರದೇಶಿಗಳಿಗೆ ವೃದ್ಧಾಪ್ಯ ವೇತನಕ್ಕೆ ಅರ್ಜಿ ಹಾಕಿಸಿದ, ರೈತರಿಗೆ ಸಹಕಾರಿ ಸಂಘದಿಂದ ಬೆಳೆ ಸಾಲಕ್ಕೆ ವ್ಯವಸ್ಥೆ ಮಾಡಿಸಿದ. ಕಾಲೇಜು ಪ್ರಾರಂಭವಾದಾಗ ಮಾರ ನಗರಕ್ಕೆ ಹೊರಡಲೇಬೇಕಾಗುತ್ತದೆ. ಅವನ ಅಗಲುವಿಕೆಯಿಂದ ದುಃಖಿತನಾದ ಕಾಳನನ್ನು ಸಂತೈಸಿ ಮಾರ ಹಳ್ಳಿ ಬಿಟ್ಟು ಹೊರಡುತ್ತಾನೆ.

**ಉಪಸಂಹಾರ**

ತೋಟದಮನೆ ಕಾದಂಬರಿಯಲ್ಲಿ ಬರುವ ರಾಮಣ್ಣ, ಜ್ಯೂಲಿ, ಶಾಪ ಕಾದಂಬರಿಯಲ್ಲಿ ಬರುವ ಕಾಳ, ಮಾರಣ್ಣ ಈ ಪಾತ್ರಗಳು ಕಾದಂಬರಿಯ ಕಥಾವಸ್ತುವಿನ ವಿನ್ಯಾಸವನ್ನೇ ಬದಲಯಿಸುವ ಸಾಮರ್ಥ್ಯವನ್ನು ಪಡೆದಿವೆ. ಈ ಎರಡು ಕಾದಂಬರಿಗಳಲ್ಲೂ ಕಂಡುಬರುವ ಸಮಾನ ಅಂಶವೆಂದರೆ ಶತಮಾನಗಳಿಂದಲೂ ತುಳಿತಕ್ಕೆ ಒಳಗಾದವರ ಬದುಕಿನ ನೈಜ ಚಿತ್ರಣವನ್ನು ಒಳಗೊಂಡಿದೆ. ಅಸ್ಪೃಶ್ಯತೆ ಭಾರತೀಯ ಸಮಾಜಕ್ಕಂಟಿದ ಶಾಪ. ಇಲ್ಲಿ ತುಳಿತಕ್ಕೆ ಒಳಗಾದವರು ಎಚ್ಚೆತ್ತುಕೊಂಡು ಸಿಡಿದುನಿಂತಾಗ ಮಾತ್ರ ದಲಿತ ಸಮುದಾಯಕ್ಕೆ ಸಾಮಾಜಿಕ ನ್ಯಾಯ ದೊರೆಯಲು ಸಾಧ್ಯವೇ ಹೊರತು, ಇದು ಯಾವುದೇ ಕಾಯ್ದೆ–ಕಾನೂನುಗಳಿಂದಾಗಲೀ,

ಭಾಷಣಗಳಿಂದಾಗಲೀ ಸಾಧ್ಯವಿಲ್ಲ. ಅನ್ಯಾಯದ ಧ್ವನಿಯೆತ್ತಿ ನಿಲ್ಲಬೇಕು ಮತ್ತು ಈ ಕಾದಂಬರಿಯಲ್ಲಿ ಬರುವ ಪ್ರಸಂಗಗಳು ಕೆಳವರ್ಗದ ಜನರ ಮೇಲಿನ ದೌರ್ಜನ್ಯ ಕಣ್ಣಿಗೆ ಕಟ್ಟಿದಂತಾಗಿ, ಓದುಗರ ಮನಸ್ಸು ದಲಿತರಿಗಾಗಿ ಮಿಡಿಯುತ್ತದೆ.

**ಕೊನೆ ಟಿಪ್ಪಣಿಗಳು**

1. ಅಜ್ಜಂಪುರ ಜಿ. ಸೂರಿ. (1994). *ತೋಟದ ಮನೆ.* ಪುಟ.36
2. ಅದೇ. ಪುಟ. 48
3. ಅದೇ. ಪುಟ. 71
4. ಅಜ್ಜಂಪುರ ಜಿ. ಸೂರಿ. (1990). *ಶಾಪ.* ಪು.11
5. ಅದೇ. ಪುಟ. 51
6. ಅದೇ. ಪುಟ. 52
7. ಅದೇ. ಪುಟ. 16
8. ಅದೇ. ಪುಟ. 100
9. ಅದೇ. ಪುಟ. 100
10. ಅದೇ. ಪುಟ. 101

**ಆಕರ ಗ್ರಂಥಗಳು**


- ಅಜ್ಜಂಪುರ ಜಿ. ಸೂರಿ. (1994). *ತೋಟದ ಮನೆ.* ಗಜಾನನ ಪ್ರಕಾಶನ.
- ಅಜ್ಜಂಪುರ ಜಿ. ಸೂರಿ. (1990). *ಶಾಪ.* ಹೇಮಂತ ಸಾಹಿತ್ಯ ಪ್ರಕಾಶನ.